ಅಧ್ಯಕ್ಷರೇ —ಮಧ್ಯಬಿಸಿ ರೆಕ್ರೂಟ್‌ಮೆಂಟ್ ಆಗಿದೆ ಎಂದು ಹೇಳುತ್ತೀರಿ ಇದು ಸತ್ಯವೇ ಎಂದು ಕೇಳುತ್ತೇನೆ ?

ಶ್ರೀ ಬಿ. ರಾಚಯ್ಯ —೧೯೮೧ನೇ ಇಸವಿಯಲ್ಲಿ ನಡೆದ ಪರೀಕ್ಷಾ ಅಭ್ಯರ್ಥಿಗಳ ಪೈಕಿ ೫೦ ಜನರನ್ನು ಆರಿಸಲಾಗಿದೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಜಿಲ್ಲಾವಾರು ಪಟ್ಟಿ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಬೆಂಗಳೂರು ೨, ತುಮಾರು ೩, ಚಿತ್ರದುರ್ಗ ೫, ಶಿವಮೊಗ್ಗ ೪, ಮೈಸೂರು ೫, ಮಂಡ್ಯ ೪, ಹಾಸನ ೯, ಚಿಕ್ಕಮಗಳೂರು ೪, ಕೊಡಗು ೩, ದಕ್ಷಿಣಕನ್ನಡ ೨, ಉತ್ತರ ಕನ್ನಡ ೪, ಬೆಳಗಾಂ ೧, ಬಿಜಾಪುರ ೬, ಧಾರವಾಡ ೨, ಬೀದರ್ ೧ ಒಟ್ಟು ೫೦.

ಬೆಂಗಳೂರು ವಿ. ವಿ. ಪುರಂ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರ ಅಪಹರಣ

೧೦೫೪. ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿ. ವಿ. ಪುರಂ ಕಾಲೇಜ್ ಉಪಾಧ್ಯಾಯ ಶ್ರೀ ಬಿ. ಜಯರಾಂ ಎಂಬುವರು ದಿನಾಂಕ ೧೩-೧೧-೮೩ ರಿಂದ ಕಾಣೆಯಾಗಿರುವ ಬಗ್ಗೆ ದೂರು ಏನಾದರೂ ಬಂದಿದೆಯೇ ?

ಆ) ಈ ಪ್ರಕರಣವನ್ನು ಸಿ. ಓ. ಡಿ. ತನಿಖೆಗೆ ಒಪ್ಪಿಸಲಾಯಿತೆ ? ಹಾಗಿದ್ದಲ್ಲಿ, ಅದರ ಫಲಿತಾಂಶವೇನು?

ಇ) ಶ್ರೀ ಬಿ. ಜಯರಾಮ್‌ರವರ ಸಹೋದರ ಶ್ರೀ ಟಿ. ಬಿ. ನಿಂಗೇಗೌಡರು ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಲು ಕೇಳಿದ್ದಾರೆಯೇ ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—

ಅ) ಹೌದು.

ಆ) ಹೌದು. ಶ್ರೀ ಬಿ. ಜಯರಾಮ್‌ರವರನ್ನು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದೆ.

ಇ) ಅದಾಗಿಹ ಕೋರಿಕೆ ಸರ್ಕಾರಕ್ಕೆ ಬಂದಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ —ಸನ್ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ 'ಹೌದು' ಎಂದು ಹೇಳಿದ್ದಿರಿ. ಈ ಬಗ್ಗೆ ಕಂಪ್ಲೇಂಟ್ ಕೊಟ್ಟಮೇಲೆ ತಾವು ಇನ್‌ವೆಸ್ಟಿಗೇಷನ್‌ಗೆ, ಸಿ.ಓ.ಡಿ.ಗೆ ಕೊಟ್ಟಿದ್ದೀರಿ ಶ್ರೀಮಾನ್ ನಿಂಗೇಗೌಡರು ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಕೊಟ್ಟಮೇಲೆ ಜಡ್ಜ್‌ಮೆಂಟ್ ಆಯಿತು. ರಿಟ್ ಪಿಟಿಷನ್ ನಂ. ೩೦-೪೪ರಲ್ಲಿ. ಇದರಲ್ಲಿ ಪೋಲಿಸಿನವರು ಮಾಡಿದ ತನಿಖೆಸಾಲದು, ಇನ್ನೂ ಹೆಚ್ಚು ಜಾಗರೂಕತೆಯಿಂದ ತನಿಖೆ ಮಾಡಬೇಕು ಎಂದು ಚೀಫ್ ಜಸ್ಟೀಸ್ ರವರು ಹೇಳಿರುವುದನ್ನು ಜಡ್ಜ್‌ಮೆಂಟ್‌ನಲ್ಲಿ ನೋಡಿದ್ದೇನೆ.

ಶ್ರೀ ಬಿ. ರಾಚಯ್ಯ —ಅದರ ಆಧಾರದ ಮೇಲೆ, ಸಿ.ಓ.ಡಿ ಗೆ ತನಿಖೆ ನಡೆಸಬೇಕೆಂದು ಹೇಳಿದ್ದೆನೆ. ಇತ್ತೀಚೆಗೆ ನನಗೆ ತಿಳಿದು ಬಂದಿರುವ ಹಾಗೆ ೧೩-೧೧-೮೩ರಲ್ಲಿ ಅವರು ಕಾಣೆಯಾದರು. ೧೪-೧೧-೮೩ರಲ್ಲಿ.

> "At Bangalore Hosur Road in which a B.T.S. bus dashed against an Autorickshaw resulting in grievious injuries to ehe auto driver and death to the passenger of the auto at Vic oria Hospital. The same day at about 9 a.m. a case in Wilson Garden Police Station was registered in crime No. 745-83 under Section 289 and 304 (a) of IPC was taken up in this connection. The case is on CC No. 182/84 of NM 14 Court, Bangalore City that the deceased had remained

unidentified. The photo of the said deceased were shown to the friends and person of the locality where Sri Jayarama was living, is identified as that of the said person. Further steps are being taken for confirmation of the identification."

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ನಾನು ಇದರ ಬಗ್ಗೆ ಪ್ರತ್ಯೇಕವಾಗಿ ಕಲಿಂಗ್ ಅಟೆನ್‌ಷನ್ ಹಾಕುತ್ತೇನೆ. ಇದು ಬಹಳ ಗೂಢವಾಗಿದೆ. ದಿನಾಂಕ ೨೨-೧೧-೧೯೮೫ರಲ್ಲಿ ಅವರ ಸಹೋದರ ನಿಂಗೇಗೌಡರು ಇವರ ನಾಪತ್ತೆಯಾದ ಬಗ್ಗೆ ದೂರು ಕೊಟ್ಟರು. ದೂರು ಕೊಟ್ಟ ಮೇಲೆ ಜಯರಾಮ್ ರವರ ಫೋಟೋ ಇರುವ ಸುಮಾರು ೧೫೦ ಪಾಂಪ್ಲೆಟ್ಸ್ ಪೋಲೀಸನವರಿಗೆ ಕೊಟ್ಟಿದ್ದಾರೆ ಟಿ.ವಿ. ನಲ್ಲಿ ಫೋಟೋ ಕೊಟ್ಟು, ರೇಡಿಯೋದಲ್ಲಿ ಪ್ರಚಾರ ಮಾಡುವಂತಹ ಕಾರ್ಯಕ್ರಮವನ್ನು ಪೋಲೀಸಿನವರು ತೆಗೆದುಕೊಂಡಿದ್ದಾರೆಯೇ? ಎರಡನೆಯದು ಫೋಟೋ ಸಿಕ್ಕಿದ್ದು ೧೪ನೇ ತಾರೀಖು; ಆಕ್ಸಿಡೆಂಟ್‌ನಲ್ಲಿ ಅವರು ಸತ್ತುಹೋಗಿದ್ದಾರೆಂದು ಹೊಸಕಥೆ ಪ್ರಾರಂಭವಾಯಿತು. ಶ್ರೀಮಾನ್ ನಿಂಗೇಗೌಡರು ದೂರು ಕೊಟ್ಟಿದ್ದಾರೆ. ಪೋಲೀಸರನ್ನು ಪ್ರಶ್ನೆ ಮಾಡಿದ್ದಾರೆ. ಬೇರೆ ಲೋಕಾಲಿಟಿ ಜನರನ್ನು ಪ್ರಶ್ನೆ ಮಾಡಿದ್ದಾರೆ. ಈ ಆಕ್ಸಿಡೆಂಟ್ ಜಯರಾಂಗೆ ಸಂಬಂಧಪಟ್ಟಿದ್ದು ಎಂದು ಹೇಳಿ ತಾವು ಕನ್‌ಫರ್ಮೇಷನ್ ಮಾಡಿ ?

ಶ್ರೀ ಬಿ. ರಾಚಯ್ಯ.—ಅದು ಇನ್ನೂ ಕನ್‌ಫರ್ಮೇಷನ್ ಆಗಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವರು ದೂರು ಕೊಟ್ಟಿದ್ದರೂ ಅವರನ್ನು ಪ್ರಶ್ನೆ ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಹೈಕೋರ್ಟಿನಿಂದ ಡೈರಕ್ಷನ್ ಕೊಟ್ಟಮೇಲೆ, ಸಿ.ಓ.ಡಿ. ಇನ್‌ಸ್ಪೆಕ್ಟರ್ ತನಿಖೆ ಮಾಡುತ್ತಿದ್ದಾರೆ. ಅವರ ಅಣ್ಣ ಯಾರಿದ್ದಾರೆ ಅವರು ಅವರನ್ನು ತೋರಿಸಬೇಕೆಂದೂ, ಇದು ಕನ್‌ಫರ್ಮೇಷನ್ ಆಗುವವರೆಗೆ ಸ್ಟೇಟ್‌ಮೆಂಟ್ ಕೊಡುವುದೆಲ್ಲವೆಂದೂ ಹೇಳಿದ್ದೇನೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಅವರು ಇವತ್ತೂ ಕೂಡ ನನ್ನನ್ನು ಭೇಟಿ ಮಾಡಿದ್ದರು. ಇದು ೧೯೮೫ರಲ್ಲಿ ಘಟನೆ ನಡೆದಿರುವುದು. ಅವರು ಯಾರೂ ಅಲ್ಲ, ಕಾಲೇಜ್ ಲೆಕ್ಚರರ್. ಶ್ರೀಮಾನ್ ನಿಂಗೇಗೌಡರು ಜಯರಾಂ ಅವರು ಕೊಲೆ ಆಗಿಲ್ಲವೆಂದು ಹೇಳುತ್ತಾರೆ. ಪೋಲೀಸಿನವರು ಅವರು ಸತ್ತು ಹೋಗಿದ್ದಾರೆ ಎನ್ನುವ ಮಾತನ್ನು ಹೇಳುತ್ತಾರೆ. ಸಿ.ಓ.ಡಿ. ಅವರ ಮೇಲೆ ವಿಶ್ವಾಸ ಇಲ್ಲ. ಸಿ.ಓ.ಡಿ ಗೆ ಇದನ್ನು ರೆಫರ್ ಮಾಡಿ, ಕೇಂದ್ರಕ್ಕೆ ಒಪ್ಪಿಸಬೇಕೆಂದು ನಾನು ಹೇಳುತ್ತಿದ್ದೇನೆ. ಇದು ಬಹಳ ಮಹತ್ವವಾದುದು. ಎರಡು ವರ್ಷವಾದರೂ ಕೂಡ ಇನ್ನೂ ಗೃಹಮಂತ್ರಿಗಳು ಇದನು ಪರಿಶೀಲನೆ ಮಾಡುತ್ತೇವೆ, ರಿಪೋರ್ಟ್ ಬರಬೇಕೆಂದು ಹೇಳುತ್ತಿದ್ದಾರೆ. ಹೈಕೋರ್ಟ್ ಆದೇಶ ಬಂದಿದೆ ನೋಡುತ್ತೇವೆಂದು ಹೇಳುತ್ತಾರೆ. ಇವೊತ್ತು ಕಾಲೇಜಿನಲ್ಲಿ ಪಾಠ ಹೇಳಕ್ಕ ಒಬ್ಬ ಲಕ್ಚರರ್‌ಗೆ ಈ ಗತಿಯಾದರೆ, ಬೇರೆಯವರಿಗೆ ನಾನು ಪರಿಸ್ಥಿತಿ ?

ಅಧ್ಯಕ್ಷರು.—ತಾವು ನೇರವಾದ ಪ್ರಶ್ನೆ ಕೇಳಿ, ಟೈಂ ಹೆಚ್ಚು ತೆಗೆದುಕೊಳ್ಳಬೇಡಿ.

ಶ್ರೀ ಧರ್ಮಸಿಂಗ್.—ನೇರವಾಗಿ ತಮ್ಮ ಮುಖಾಂತರ ಗೃಹಮಂತ್ರಿಗಳನ್ನು ಕೇಳುತ್ತಿದ್ದೇನೆ. ಎರಡು ವರ್ಷಗಳಾದರೂ ಕೂಡ ಇನ್ನೂ ಇದರಬಗ್ಗೆ ನೋಡುತ್ತೇನೆ, ಎಂದು ಹೇಳುತ್ತಿದ್ದಾರೆ. ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ಇವೊತ್ತು ಇಂತಹ ಎಷ್ಟೋ ಘಟನೆಗಳು ಆಗುತ್ತಿವೆ, ಈ ಪ್ರಕರಣವನ್ನು ಕೇಂದ್ರಕ್ಕೆ ಒಪ್ಪಿಸಬೇಕು ಎನ್ನುವುದು ನಿಂಗೇಗೌಡರ ಪ್ರಾರ್ಥನೆ ಇದೆ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಬಿ. ರಾಚಯ್ಯ.—ಇದರ ಬಗ್ಗೆ ಇನ್ನೂ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಇನ್ನೂ ಪೂರ್ಣವಾಗಿ ನಡೆದಿಲ್ಲ. ನಮ್ಮ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ, ಪೇಪರಿನಲ್ಲಿಯೂ ಹಾಕಿಸಿದ್ದೇವೆ, ಫೋಟೋ ಹಾಕಿಸಿದ್ದೇವೆ, ಟಿ.ವಿ.ಯಲ್ಲಿ ಹೇಳಿದ್ದೇವೆ. ಆದುದರಿಂದ ಈಗ ನನಗೆ ಬಂದಿರತಕ್ಕ ವರ್ತಮಾನದ ಪ್ರಕಾರ, ಸಿಓಡಿ ರಿಪೋರ್ಟ್ ಪ್ರಕಾರ ಇನ್ನೂ ಫೈನಲ್ಲಾಗಿ ಸತ್ತಿರತಕ್ಕಂಥಾದ್ದೇ, ಇಲ್ಲವೇ ಎನ್ನುವುದು ತಿಳಿದಿಲ್ಲ. ಅವರ ಬ್ರದರ್ಸ್, ಫ್ಯಾಮಿಲಿಯವರು ಯಾರಿದ್ದಾರೆ ಅವರು ಹಾಗೆಂದು ಒಪ್ಪಿಕೊಂಡಾಗ ಕನ್‌ಫರ್ಮ್ ಮಾಡುತ್ತೇವೆ.

ಶ್ರೀ ಕೆ.ಬಿ. ಶಾಣಪ್ಪ.—೩೭೭ (೨೯೩) ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ,